



# ಅವನು ಮತ್ತು ಅವಳ ಕಥೆ

ಲಕ್ಷ್ಮಿ ಮತ್ತು ಕೇಶವ ಆ ನಿರ್ಜನ ಕಾಲೇಜು ರಸ್ತೆಯಲಿದ್ದ ಅಂಗಡಿ ಮುಂದಿನ ಸಣ್ಣ ಛಾವಣಿಯ ಆಸರೆ ಪಡೆದು ಆಗಲೇ ಐದು ನಿಮಿಷವಾಗುತ್ತಾ ಬಂದಿತ್ತು. ಮಳೆ ಕಡಿಮೆಯಾಗಿರಲಿಲ್ಲ. ಇಡೀ ಬೀದಿಯಲ್ಲಿ ಇದ್ದದ್ದು ಬೆಳಕಿನ ಬದಲು ಕತ್ತಲು ಹರಡುತ್ತಿರುವಂತಿದ್ದ ಒಂದು ಮಂಕು ಬೀದಿ ದೀಪ ಮಾತ್ರ. ಸಣ್ಣ ಛಾವಣಿಯಾದ್ದರಿಂದ ಸ್ವಲ್ಪವೇ ಕೈ ಚಾಚಿದರೂ ಒಬ್ಬರನ್ನೊಬ್ಬರು ಸ್ಪರ್ಶಿಸಬಹುದಾದಷ್ಟು ಹತ್ತಿರದಲ್ಲಿ ನಿಂತಿದ್ದ ಅವರಿಬ್ಬರೇ ಈ ದೀಪಕ್ಕಿಂತ ಹೆಚ್ಚು ನಿಗಿನಿಗಿಸುತ್ತಿದ್ದರು. ಕೇಶವನ ಕಿವಿಗೆ ಹೆಡ್ ಫೋನ್ ಅಂಟಿಕೊಂಡಿತ್ತಾದರೂ ಅದರಲ್ಲಿ ಬರುತ್ತಿದ್ದ ಹಾಡು ನಿಂತು ಹೋಗಿತ್ತು. ತನ್ನ ಹೆಡ್ ಫೋನಿನ ರಕ್ಷಣಾ ಕವಚವನ್ನೂ ಭೇದಿಸಿ ಅವಳ ಉಸಿರಾಟ ಕೇಳಿಸುತ್ತಿರುವಂತೆ ಕೇಶವನಿಗೆ ಅನಿಸಿ, ಅದು ನಿಜವೋ ಭ್ರಮೆಯೋ ತಿಳಿಯದೆ ಗೊಂದಲಗೊಂಡ. ಏನೋ ಹೊಳೆದವನಂತೆ ತನ್ನ ಮೊಬೈಲ್ ಹುಡುಕಿ 'ಝಿಂದಗೀ ಭರ್ ನಹೀ ಭೂಲೇಂಗೆ ಓ ಬರಸಾತ್ ಕೀ ರಾತ್' ಹಾಡು ಹಾಕಿದ. ಅವಳಿಗೂ ಕೇಳಿಸಲಿ ಎಂಬ ಉದ್ದೇಶದಿಂದ ಅವಳ ಬದಿಯ ಇಯರ್ ಫೋನನ್ನು ಕಿವಿಯಿಂದ ತೆಗೆದು, ಪೂರ್ತಿ ವಾಲ್ಯೂಮ್ ಕೊಟ್ಟ. ಆದರೆ, ಮಳೆಯ ಸದ್ದಿನಲ್ಲಿ ಹಾಡಿನ ಯಾವ ಭಾವ, ಸಾಹಿತ್ಯ, ಸಂದೇಶಗಳೂ ಅವಳನ್ನು ತಲುಪಲಿಲ್ಲ. ತಲುಪಿದ್ದರೂ ಅವಳಿಗೆ ಅರ್ಥವಾಗುವುದು ಸಾಧ್ಯವಿರಲಿಲ್ಲ. ಲಕ್ಷ್ಮಿಗೆ ಅಷ್ಟೆಲ್ಲಾ ಹಿಂದಿ ಬರುವುದಿಲ್ಲ.

ಮಿಂಚು ಫಳೀರೆಂದಿತು. ಲಕ್ಷ್ಮಿ ಹೆದರಲು ಸಾಕಷ್ಟು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಕನಿಷ್ಠ ಹೆದರಿದಂತೆ ನಟಿಸಿ ಆತನ ಕಡೆ ಕೈ ಚಾಚಲೇ ಎಂಬ ಅದಮ್ಯ ಬಯಕೆ ಅವಳನ್ನು ಕಾಡಿತು. ತೀರಾ ಸುಲಭವಾಗಿ ಭಯ ಬೀಳುವ ಸಿನಿಮಾ ನಾಯಕಿಯರನ್ನು ನೆನೆದು ಅಸೂಯೆಪಟ್ಟಳು. ಮಳೆ, ಅರೆಗತ್ತಲು,